ನಿ-72
ಕ್ರ-26
146ನೇ ಅಧಿವೇಶನ
ಕಂಪ್ಯೂಟರ್

**ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ, ಶ್ರೀ ಮರಿತಿಬ್ಬೇಗೌಡ, ಶ್ರೀ ಹೆಚ್. ಎಂ. ರಮೇಶಗೌಡ, ಶ್ರೀ ಕೆ.ಟಿ. ಶ್ರೀ ಕಂಠೇಗೌಡ ರವರುಗಳು ನಿಯಮ-72ರ ಅಡಿಯಲ್ಲಿ ಉತ್ತರ ಸಲ್ಲಿಸುವ ಬಗ್ಗೆ**

ವಿಷಯ

ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸರ್ಕಾರಿ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ವಿಶೇಷ ಶಿಕ್ಷಕರಿಗೆ ವಿಲೀನಾತಿ ಮತ್ತು ಜೇಷ್ಠತೆ ನಿಯಮಗಳನ್ನು ರೂಪಿಸಿ ಪಿಂಚಣಿ ನೀಡುವ ಸಂಬಂಧ ಸಚಿವ ಸಂಪುಟದ ಅನುಮೋದನೆ ಪಡೆದು 2 ವಾರಗಳಲ್ಲಿ ಪಿಂಚಣಿ ನೀಡುವುದಾಗಿ ಮಾನ್ಯ ಸಚಿವರು ಭರವಸೆ ಸಂಖ್ಯೆ: ಮಮಇ/284/ಪಿಹೆಚ್‌ಪಿ/2021ರಲ್ಲಿ ಭರವಸೆ ನೀಡಿದ್ದು, ದಿನಾಂಕ:06.01.2022ರಂದು ಪಿಂಚಣಿ ನೀಡಲು ಸಚಿವ ಸಂಪುಟ ಅನುಮೋದನೆ ನೀಡಿದ್ದರೂ ಸಹ ಈವರೆಗೂ ಕ್ರಮ ಕೈಗೊಂಡಿರುವುದಿಲ್ಲ.

ಆದರೆ ಮಾನ್ಯ ಸಚಿವರು ಕಳೆದ 9 ಅಧಿವೇಶನಗಳಿಂದಲೂ ಸದನದಲ್ಲಿ ಪಿಂಚಣಿ ನೀಡಲು ಭರವಸೆ ನೀಡುತ್ತಿದ್ದು ಸರ್ಕಾರದ ಪತ್ರ ಸಂಖ್ಯೆ:ಮಮಇ/141/ಪಿಹೆಚ್‌ಪಿ 2021, ದಿನಾಂಕ:14.12.2021 ರಂತೆ ವಿಲೀನಾತಿ ನಿಯಮಗಳನ್ನು ರೂಪಿಸಿ, ಜೇಷ್ಠತೆಯನ್ನು ನಿಗದಿಗೊಳಿಸಿ ಪಿಂಚಣಿ ನೀಡಲು ಕ್ರಮ ಕೈಗೊಳ್ಳದೇ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಉದಾಸೀನತೆ ಧೋರಣೆಯಿಂದ ತೀವ್ರ ಆರ್ಥಿಕ ಸಂಕಷ್ಟದಲ್ಲಿರುವ ನಿವೃತ್ತ ಶಿಕ್ಷಕರಿಗೆ ಕೂಡಲೇ ಪಿಂಚಣಿ ನೀಡಲು ನಿರ್ದಿಷ್ಟ ಸಮಯವನ್ನು ಕೋರಿ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯ ಬಯಸುತ್ತೇನೆ

ಉತ್ತರ

ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಶಾಲೆಯ ನಿವೃತ್ತ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ದೊರಕಿಸಿಕೊಡುವ ಬಗ್ಗೆ ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿದ್ದು, ಅದರಂತೆ ಪಿಂಚಣಿ ಇತ್ಯರ್ಥ ಪಡಿಸಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಮಮಇ 48 ಪಿಹೆಚ್‌ಪಿ 2022

Halappa B.A.

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು